# ನವಿಲುಗನ್ನಡಿ

- ಮೇ ಸಂಚಿಕೆಯ 'ಮಾತುಕತೆ'ಯಲ್ಲಿ ಪ್ರಕಟವಾದ ಕವಿ ಸತ್ಯಾನಂದ ಪಾತ್ರೋಟ ಅವರ ಸಂದರ್ಶನ (ಸಂ: ವೆಂಕಟಗಿರಿ ದಳವಾಯಿ) ಸೊಗಸಾಗಿದೆ. 'ಕಾವ್ಯವೆಂದರೆ ಹೊಸ ಮನುಷ್ಯನ ಹುಡುಕಾಟ' ಎಂಬ ಅವರ ಮಾತು ಚಿಂತನಶೀಲವಾಗಿದೆ.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

- ಬದುಕಿನ ಸುಡುಬಿಸಿಲಿನಲ್ಲೂ ಸತ್ಯದ ಹಾದಿಯನ್ನು ತುಳಿದು ಜಾಜಿ ಮಲ್ಲಿಗೆ ಅರಳಿಸಿದ ಕವಿ ಸತ್ಯಾನಂದರ ಸಂದರ್ಶನದ ಪೂರ್ವಾರ್ಧದಲ್ಲಿ ಕಣ್ಣು ತುಂಬಿ ಬಂದರೆ, ಉತ್ತರಾರ್ಧದಲ್ಲಿ ಮನ ತುಂಬಿ ಬಂತು.

**ರೇಖಾ ರಂಗನಾಥ ಭೈರಕ್ಕನವರ, ಹಾವೇರಿ,**
**ಅಂಬಾದಾಸ ವಡೆ, ಬಾಗಲಕೋಟೆ**


- ತನ್ನ ಬಾಳನ್ನು ತಾನೇ ರೂಪಿಸಿಕೊಳ್ಳಲು ಹೊರಟ ಮನುಷ್ಯನನ್ನು ಜಾತಿಯ ಕೊರಕಲಿನಲ್ಲಿ ಸಮಾಜ ಸಿಕ್ಕಿಸುವುದರ ಚಿತ್ರಣ ಬನವಾಸಿ ವೆಂಕಟೇಶ ದೀಕ್ಷಿತರ 'ಹಾದಿಗಳೂ ಹೆಜ್ಜೆಗಳೂ' ಕತೆಯಲ್ಲಿ ಸುಂದರವಾಗಿ ಬಂದಿದೆ.

**ಎಸ್.ಪಿ. ಪದ್ಮಪ್ರಸಾದ್, ತುಮಕೂರು**

- ರಾಜಕುಮಾರ್ ವ್ಹಿ. ಕುಲಕರ್ಣಿ ಅವರ ಕತೆ 'ಸಾವಿಲ್ಲದ ಮನೆಯ ಸಾಸಿವೆ' ಕೊನೆಯವರೆಗೂ ಕುತೂಹಲ ಕಾಯ್ದುಕೊಂಡಿದೆ.

**ಬಿ.ಆರ್. ಅಣ್ಣಾಸಾಗರ, ಸೇಡಂ**

- ಎ.ವಿ. ಪ್ರಸನ್ನ ಅವರು ಆಂಡಯ್ಯನ 'ಕಬ್ಬಿಗರ ಕಾವ' ಕುರಿತಾದ ತಮ್ಮ ಲೇಖನದಲ್ಲಿ ('ನಿಚ್ಚಂ ಪೊಸತು' ಅಂಕಣ) ಅದು ಕನ್ನಡದ ಮೊತ್ತ ಮೊದಲ ಅಚ್ಚ ಕನ್ನಡದಲ್ಲೇ ರಚಿತವಾಗಿರುವ ಕೃತಿ ಎಂದು ಬರೆದಿದ್ದಾರೆ. ಅದು 'ಅಚ್ಚ' ಕನ್ನಡದ




ಮೊತ್ತ ಮೊದಲ ಕೃತಿ ಎನ್ನುವುದು ಕಷ್ಟ. ಯಾಕೆಂದರೆ ಅದರಲ್ಲಿ ಸಾಕಷ್ಟು ತದ್ಭವ ಪದಗಳೂ ಇವೆ. ಅಚ್ಚ ಕನ್ನಡದಲ್ಲೇ ರಚಿತವಾದ ಕನ್ನಡದ ಕೃತಿಗಳೆಂದರೆ ಕೊಳಂಬೆ ಪುಟ್ಟಣ್ಣ ಗೌಡರ 'ಕಾಲೂರ ಚೆಲುವೆ' ಹಾಗೂ 'ನುಡಿವಣಿಗಳು' ಎನ್ನುವ ಕಾವ್ಯ ಕೃತಿಗಳು. ಕಾಲೂರ ಚೆಲುವೆಯ ರಚನೆಗೆ ಅವರು ಪುರಾಣದ ಕತೆಗಳನ್ನು ಆಯ್ದುಕೊಳ್ಳದೆ ಸಾಮಾಜಿಕ ಕತೆಯೊಂದನ್ನು ಆಯ್ದುಕೊಂಡುದಕ್ಕೆ ಕಾರಣ, ಪುರಾಣದ ಕತೆ ಆಯ್ದುಕೊಂಡರೆ ಅಲ್ಲಿನ ಪಾತ್ರಗಳ ಹೆಸರುಗಳ ತದ್ಭವ ರೂಪವನ್ನು ಬಳಸಬೇಕಾಗುತ್ತದೆ, ಅದು ಬೇಡ ಎಂಬುದಕ್ಕಾಗಿ. ಈ ಎರಡು ಕೃತಿಗಳು ನಿಜಕ್ಕೂ ಅಚ್ಚ ಕನ್ನಡದ ಕೃತಿಗಳೇ ಆಗಿವೆ. ಈ ಕೊಳಂಬೆ ಪುಟ್ಟಣ್ಣ ಗೌಡರು ಕವಿ ಕುವೆಂಪು ಅವರ ಅಳಿಯ ಚಿದಾನಂದ ಗೌಡರ ತಂದೆ. ಉಳಿದಂತೆ ಪ್ರಸನ್ನ ಅವರ ಲೇಖನ ತುಂಬಾ ಚೆನ್ನಾಗಿದೆ.

**ಸುಬ್ರಾಯ ಚೊಕ್ಕಾಡಿ, ಸುಳ್ಯ**

- ಶ್ರೀದೇವಿ ಕಳಸದ ಅವರ ಕತೆ 'ಶಾಕಾಂಬರಿ ಮಹಾತ್ಮೆ' ಬಹಳ ಇಷ್ಟವಾಯಿತು.

**ಮಂಜುಳಾ ಹರಿಯಬ್ಬೆ, ಬೆಂಗಳೂರು**